**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,ರವರ ನ್ಯಾಯಾಲಯ, ಕಡೂರು**

**ಓ.ಎಸ್.ನಂ.209/2017**

**ದಿನಾಂಕ:16.03.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

ಪಿ.ಡಬ್ಲ್ಯು:1

**ಮುಖ್ಯ ವಿಚಾರಣೆ: ವಾದಿ ಪರ ಶ್ರೀ.ಡಿ.ಜಿ.ಆರ್. ವಕೀಲರಿಂದ:-**

ನಾನು ವಾದಿಯಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ. ಅದನ್ನು ಓದಿ, ತಿಳಿದು, ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ನಾನು ನನ್ನ ಮುಖ್ಯ ವಿಚಾರಣೆಯೊಂದಿಗೆ ಎರಡು ಖಾತಾ ಎಕ್ಸ್ ಟ್ರಾಕ್ಟಿನ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-1 ಮತ್ತು 2 ಎಂದು, ಅಸೆಸ್ಮೆಂಟ್ ನ ದೃಢೀಕೃತ ನಕಲನ್ನು ನಿಪಿ-3 ಎಂದು, ಗರ್ಜೆ ಗ್ರಾಮ ಪಂಚಾಯ್ತಿಯವರು ಮಾಹಿತಿ ಹಕ್ಕಿನ ಅಡಿ ನೀಡಿರುವ ಉತ್ತರದ ಪ್ರತಿಗಳನ್ನು ನಿಪಿ-4 ಮತ್ತು ನಿಪಿ-5 ಎಂದು, ವಂಶವೃಕ್ಷದ ದೃಢೀಕೃತ ನಕಲನ್ನು ನಿಪಿ-6 ಎಂದು, ಖಾತಾ ಪುಸ್ತಕದ ದೃಢೀಕೃತ ನಕಲನ್ನು ನಿಪಿ-7 ಎಂದು, ಐದು ಕಂದಾಯ ರಶೀದಿಗಳನ್ನು ನಿಪಿ-8 ರಿಂದ ನಿಪಿ-12 ಎಂದು, ಪೋಟೋಗಳ ದೃಢೀಕೃತ ನಕಲನ್ನು ನಿಪಿ-13 ಎಂದು, ಅಸಲು ದಾವಾ ಸಂಖ್ಯೆ.218/2013 ರ ಮೊದಲ ಮತ್ತು ಕೊನೆಯ ಪುಟದ ಆದೇಶದ ಪ್ರತಿಯ ದೃಢೀಕೃತ ನಕಲನ್ನು ನಿಪಿ-14 ಎಂದು, ಅಸಲು ದಾವಾ ಸಂಖ್ಯೆ.218/2013 ರಲ್ಲಿ ಸಲ್ಲಿಸಿರುವ ಮೆಮೋದ ದೃಢೀಕೃತ ನಕಲು, ವಾದಪತ್ರವನ್ನು ನಿಪಿ-15 ಮತ್ತು ನಿಪಿ-16 ಎಂದು, ನೋಟೀಸಿನ ಕಛೇರಿ ಪ್ರತಿಯನ್ನು ನಿಪಿ-17 ಎಂದು, ಎರಡು ಅಂಚೆ ರಶೀದಿಗಳನ್ನು ಒಟ್ಟಾಗಿ ನಿಪಿ-17(ಎ) ಎಂದು, ಉತ್ತರ ನೋಟೀಸನ್ನು ನಿಪಿ-18 ಎಂದು, ಅಸೆಸ್ಮೆಂಟ್ ನ ದೃಢೀಕೃತ ನಕಲನ್ನು ನಿಪಿ-19 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗಾಗಿ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರ:ದ:ನ್ಯಾ:ದಂ.,ರವರು, ಕಡೂರು.